ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಸೀಕೆರೆ.

ಸಿಮಿಸ್ ನಂ 384/2023

| | | |
|---|---|---|
| ಹೆಸರು | ಚಿನ್ನಮಣಿ | ಪ್ರಾಸಾ ಃ 1 |
| ಗಂಡನ ಹೆಸರು | ರಂಗನಾಥ ಎನ್ .ಜೆ | |
| ವಯಸ್ಸು | 52 ವರ್ಷ | |
| ಉದ್ಯೋಗ | ಅಂಗನವಾಡಿ ಕಾರ್ಯಕರ್ತೆ | **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ** |
| ವಾಸ | ಜಿ.ಮರಳಿ ಗ್ರಾಮ ನಂಜನಗೂಡು ತಾಲ್ಲೂಕು | ದಿಃ20-07-2024 |

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಜೆ ವಕೀಲರಿಂದಃ

2ನೇ ಆರ್ಜಿದಾರರು ನನ್ನ ಅವಿವಾಹಿತ ಮಗಳಾಗಿರುತ್ತಾರೆ. ಎದುರುದಾರರು ನನ್ನ ಮಗಳಾಗಿರುತ್ತಾರೆ. ದಿಃ 10-02-1996ರಲ್ಲಿ ನನ್ನ ಮತ್ತು ಎದುರುದಾರರ ಮದುವೆಯೂ ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮದ ಮಾದೇಶ್ವರ ದೇವಸ್ಥಾನದಲ್ಲಿ ಜರುಗಿತ್ತು. ನಮ್ಮ ಮದುವೆಯ ನೊಂದಣಿಯನ್ನು ಟಿ.ನರಸೀಪುರ ತಾಲ್ಲೂಕು ಉಪನೊಂದಾಣಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿಸಲಾಗಿತ್ತು. ಮದುವೆಯಾದ 10 ವರ್ಷಗಳ ಕಾಲ ಜಿ.ಮರಹಳ್ಳಿ ಗ್ರಾಮದಲ್ಲಿ ನಾನು ಎದುರುದಾರರು ಮನೆ ಮಾಡಿಕೊಂಡು ಸಂಸಾರ ಮಾಡಿಕೊಂಡಿದ್ದೆವು. ಆ ಸಮಯದಿಂದಲೂ ನಾನು ಅಂಗನವಾಡಿ

This is a True Copy of the Court Records Online. Authenticated @ districts.ecourtsindia.com/cnr/KAHS410014462023/truecopy/order-1.pdf

www.ecourtsindia.com

ಕಾರ್ಯಕರ್ತೆ ಆಗಿದ್ದೆ. 1997ರಲ್ಲಿ ನನ್ನ ಗಂಡನಿಗೆ ಅರಸೀಕೆರೆಯ ಪ್ರತಿಭಾ ಕಾಲೇಜಿನಲ್ಲಿ ಕೆಲಸ ಸಿಕ್ಕಿತ್ತು. ನಮಗೆ 2ನೇ ಅರ್ಜಿದಾರರು ಮಾತ್ರ ಮಗಳಾಗಿರುತ್ತಾರೆ.

2. ನನ್ನ ಶಿಕ್ಷಣಕ್ಕಾಗಿ ಟಿ.ನರಸೀಪುರ ಪಟ್ಟಣದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸ ಇದ್ದೆವು. ಆ ಸಮಯದಲ್ಲಿ ಅರಸೀಕೆರೆಯಲ್ಲಿ ನನ್ನ ಗಂಡ ರೂಂ ಮಾಡಿಕೊಂಡು ಇದ್ದರು. ಆಗಾಗ ಬರುತ್ತಿದ್ದರು. ಕ್ರಮೇಣ 15 ದಿನ ಒಂದು ತಿಂಗಳಿಗೆ ಒಮ್ಮೆ ಬರಲು ಆರಂಬಿಸಿದ್ದರು. ನಾನು ಕೇಳಿದರೆ ನಾನು ಉಪನ್ಯಾಸಕ ಕಾಲೇಜಿನಲ್ಲಿ ಎನ್.ಎಸ್.ಎಸ್ ಮುಂತಾದ ಕಾರ್ಯಕ್ರಮಗಳು ಇರುವುದರಿಂದ ಬರಲು ಆಗುವುದಿಲ್ಲವೆಂದು ಹೇಳುತ್ತಿದ್ದರು. ಕೋವಿಡ್-19 ಸಾಂಕ್ರಾಮಿಕ ರೋಗ ಬಂದ ನಂತರ 6 ತಿಂಗಳ ಕಾಲ ನನ್ನ ಗಂಡ ನನ್ನನ್ನು ನೋಡಲು ಬರಲೇ ಇಲ್ಲ. ಆ ಸಮಯದಲ್ಲಿ ಕಾಲೇಜಿಗೆ ಕರೆ ಮಾಡಿದರೆ ಅವರು ಬರಲಿಲ್ಲ ಎಂದು ಹೇಳುತ್ತಿದ್ದರು. ನಂತರ ನಾನು ಮತ್ತು ನನ್ನ ತಮ್ಮ ಅರಸೀಕೆರೆಯ ನನ್ನ ಗಂಡನ ವಿಳಾಸಕ್ಕೆ ಬಂದಾಗ ಎದುರುದಾರರು ಗಂಗಾಯಣಾಮ್ಮ ಃಉಃ ಗಂಗಮ್ಮ ಎಂಬುವವರನ್ನು 2ನೇ ಮದುವೆಯಾಗಿ ಅವರಿಗೆ ಒಬ್ಬಳು ಇರುವ ವಿಚಾರ ಗೊತ್ತಾಯಿತು. ನಂತರ ನನ್ನ ಗಂಡನ ಸ್ವಂತ ಊರನ ತುಮಕೂರು ಜಿಲ್ಲೆಯ ನೆರಳೇಕೆರೆ ಗ್ರಾಮಕ್ಕೆ ಹೋದಾಗ ನನ್ನ ಗಂಡನ 2ನೇ ಹೆಂಡತಿ ಮನೆಯಲ್ಲಿ ನಂತರ ಅವರು ಮದುವೆಯಾಗಿರುವ ವಿಚಾರ

This is a True Copy of the Court Records Online. Authenticated @ districts.ecourtsindia.com/cnr/KAHS410014462023/truecopy/order-1.pdf

ಗೊತ್ತಾಯಿತು. ಆ ವಿಚಾರ ನನ್ನ ಗಂಡನಿಗೆ ಗೊತ್ತಾಗಿ ನಾನು ನಿಮ್ಮ ಬಳಿ ಬರುವುದಿಲ್ಲವೆಂದು ಹೇಳಿ ನಮ್ಮನ್ನು ನಿರ್ಲಕ್ಷಸಿದ್ದರು. 2023ರವರೆಗೂ ಅವರು ಬರಲೇ ಇಲ್ಲ. ನಂತರ ಅವರ ವಿರುದ್ದ ನಾನು ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದೆ. ಮಾಹಿತಿ ಕಾಯಿದೆಯಡಿ ಎದುರುದಾರರ ಸೇವೆ ಪುಸ್ತಕದ ವಿವರವನ್ನು ಪಡೆದಾಗ ನನ್ನ ಗಂಡನ 2ನೇ ಹೆಂಡತಿಯನ್ನು ತನ್ನ ವಾರಸ್ಸುದಾರರೆಂದು ಕಾಣಿಸಿರುವುದು ಕಂಡು ಬಂತು. ಪೊಲೀಸರ ವಿಚಾರಣಾ ಕಾಲದಲ್ಲಿ ಎದುರುದಾರರು ಹಾಜರಾಗಿ ನನ್ನನ್ನು ಮದುವೆಯಾದ ವಿಚಾರವನ್ನು ಒಪ್ಪಿ ನಂತರ ಊರಿನ ಜನರ ಒತ್ತಾಯಕ್ಕಾಗಿ 2ನೇ ಮದುವೆಯಾಗಿರುವ ವಿಚಾರವನ್ನು ತಿಳಿಸಿರುತ್ತಾರೆ. ಸದರಿ ಹೇಳಿಕೆಯಲ್ಲಿ ನನಗೂ ನನ್ನ ಮಗಳಿಗೂ ತನ್ನ ಚರ ಮತ್ತು ಸ್ಥಿರ ಆಸ್ತಿಯಲ್ಲಿ ಸಮಾನ ಭಾಗ ಕೊಡುತ್ತೇನೆಂದು ತಿಳಿಸಿದ್ದರು. ನನ್ನಹೆಸರಿನಲ್ಲಿ ಮಾಡಿಕೊಂಡಿದ್ದ 2 ಲಕ್ಷ ಸಾಲವನ್ನು ಎದುರುದಾರರೇ ತಿರಿಸುತ್ತಾರೆಂದು ತಿಳಿಸಿದ್ದರು. ಅಲ್ಲಿ ಪ್ರತಿ ತಿಂಗಳು ರೂ.25 ಸಾವಿರ ಖರ್ಚು ಕೊಡುತ್ತೇನೆಂದು ವಾರ ವಾರ ಹೋಗಿಬರುತ್ತೇನೆಂದು ಬರೆದುಕೊಟ್ಟಿದ್ದರು. ನಂತರ ಪೊಲೀಸರು ಅವರ ಹೇಳಿಕೆಯ ಪ್ರಕಾರ ನನ್ನ ಅರ್ಜಿಯನ್ನು ವಿಲೇ ಮಾಡಿದ್ದರು. ನಂತರ 5-6 ತಿಂಗಳ ಕಾಲ ನನ್ನ ಮಗಳ ಖಾತೆಗೆ ರೂ 25 ಸಾವಿರವನ್ನು ಹಾಕುತ್ತಿದ್ದರು. ಜನವರಿ 2023 ರಿಂದ ಅವರು ಹಣವೂ ಹಾಕಲಿಲ್ಲ. ನಮ್ಮ ಊರಿಗೂ ಬರಲಿಲ್ಲ. ಎದುರುದಾರರು ತಮ್ಮ ಬಳಿ

This is a True Copy of the Court Records Online. Authenticated @ districts.ecourtsindia.com/cnr/KAHS410014462023/truecopy/order-1.pdf

www.ecourtsindia.com

www.ecourtsindia.com



ಆರ್ಥಿಕ ಚೈತನ್ಯ ಹೊಂದಿದ್ದರೂ ಸಹ ಉದ್ದೇಶಪೂರ್ವಕವಾಗಿ ನನ್ನನ್ನು ನನ್ನ ಮಗಳನ್ನು ನಿರ್ಲಕ್ಷ ಮಾಡಿರುತ್ತಾರೆ. ನನ್ನ ಗಂಡನಿಗೆ ಅವರ ಊರಿನಲ್ಲಿ ತೆಂಗಿನ ತೋಟ, ಮಾವಿನ ತೋಟ, ಅಡಿಕೆ ತೋಟ, 2 ಕೊಳವೆ ಬಾವಿಗಳು ಇದ್ದು ಅವರಿಗೆ ಮಾಸಿಕವಾಗಿ ಅಂದಾಜು ರೂ 1ಲಕ್ಷ 10 ಸಾವಿರ ಉಪನ್ಯಾಸಕ ಕೆಲಸದಿಂದ ಬರುತ್ತದೆ. ಆದ್ದರಿಂದ ನನ್ನ ಮಗಳ ಮದುವೆ ಖರ್ಚಿಗಾಗಿ ನಮ್ಮ ಬಾಡಿಗೆ ಮನೆ ಖರ್ಚಿಗಾಗಿ, ನನ್ನ ಮಗಳ ವಿದ್ಯಾಬ್ಯಾಸಕ್ಕಾಗಿ ಮತ್ತು ನಮ್ಮ ಜೀವನಕ್ಕಾಗಿ ಅವರಿಂದ ಜೀವನಾಂಶ ಕೋರುತ್ತೇನೆ. ಆದ್ದರಿಂದ ನನ್ನ ಅರ್ಜಿಯ ಪರಿಹಾರಗಳನ್ನು ಕೊಡಬೇಕಾಗಿ ಕೋರುತ್ತೇನೆ. ಸಾಕ್ಷಿ ಹಾಜರು ಮಾಡಿದ ಮದುವೆಯ ಆಮಂತ್ರಣ ಪತ್ರಿಕೆಯನ್ನು ನಿಪಿ-1 ಎಂದು, 2 ಅರ್.ಟಿ.ಸಿಗಳನ್ನು ನಿಪಿ2 ಮತ್ತು ನಿಪಿ-3 ಎಂದು ಗುರುತಿಸಲಾಯಿತು.

(ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು) .

ಓ ಹೇ ಕೇ ಸಾ ಇ ಒ

(ಶ್ರೀ.ಸಂದೇಶ್.ವಿ.ಭಂಡಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಅರಸೀಕೆರೆ.

This is a True Copy of the Court Records Online. Authenticated @ districts.ecourtsindia.com/cnr/KAHS410014462023/truecopy/order-1.pdf

This is a True Copy of the Court Records Online. Authenticated @ districts.ecourtsindia.com/cnr/KAHS410014462023/truecopy/order-1.pdf

www.ecourtsindia.com